## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 119/2022

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀ ಶಿವಾನಂದಸ್ವಾಮಿ | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ | ಶ್ರೀ ಆರ್.ಬಿ.ಬೆನ್ನೂರು ಮಠ್ | 30.12.2024 |
| ವಯಸ್ಸು | ಃ | 64 ವರ್ಷ | |
| ವೃತ್ತಿ | ಃ | ಮೆಡಿಕಲ್ ರೆಕಾರ್ಡ್ ಆಫೀಸರ್, ಜೆ.ಎಸ್.ಎಸ್. ಆಸ್ಪತ್ರೆ, ಮೈಸೂರು | ಪ್ರಾ.ಸಾ. ಃ 42 |
| ವಾಸಸ್ಥಳ | ಃ | ಮೈಸೂರು | ಚಾ.ಸಾ. ಃ 55 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *1992* ರಿಂದ ಇಲ್ಲಿಯವರೆಗೆ ಮೈಸೂರು ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಮೆಡಿಕಲ್ ರೆಕಾರ್ಡ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ಆ ಕಾಲಕ್ಕೆ ದಿಃ*25.10.2021* ರಂದು ಮೈಸೂರು ಸೌತ್ ಪೋಲೀಸ್ ಠಾಣೆಯ ಪೊಲೀಸರು ನಾಗಾರ್ಜುನ ಎನ್ನುವವರ ಚಿಕಿತ್ಸೆ ಕುರಿತಾದ ಕೇಸ್ ಶೀಟ್ ಮತ್ತು ಎಂ.ಎಲ್.ಸಿ ದಾಖಲೆಯನ್ನು ಕೊಡುವಂತೆ ಮನವಿ ಪತ್ರ ಕೊಟ್ಟಿದ್ದರು. ಆಗ ನಾನು ದೃಢೀಕೃತ ಕೇಸ್ ಶೀಟ್ ಮತ್ತು ಎಂ.ಎಲ್.ಸಿ ಪ್ರತಿಗಳನ್ನು ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದಾಖಲೆಗಳು ನಾನು ಕೊಟ್ಟಿದ್ದ ದೃಢೀಕೃತ ಕೇಸ್ ಶೀಟ್ ಮತ್ತು ಎಂ.ಎಲ್.ಸಿ ಪ್ರತಿಗಳು ಇವೆ. ಸದರಿ ದಾಖಲೆಗಳನ್ನು ಒಟ್ಟಿಗೆ ನಿ.ಪಿ–*72* ಎಂದು ಗುರುತಿಸಿದೆ. ನಿ.ಪಿ–*72* ದಾಖಲೆ ಪ್ರಕಾರ ಡಾ.ರವಿ ಮತ್ತು ಡಾ.ಸಂದೀಪ್ ಇವರು ಚಿಕಿತ್ಸೆ ನೀಡಿದ್ದಾರೆ. ನಿ.ಪಿ–

*72* ರಲ್ಲಿ ನಮೂದು ಇರುವಂತೆ ನಾಗಾರ್ಜುನ ಇವರು ಹಲ್ಲೆಯ ಹಿನ್ನೆಲೆಯಲ್ಲಿ ಗಾಯಗೊಂಡು ಚಿಕಿತ್ಸೆಗೆ ದಾಖಲಾಗಿದ್ದಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ-**

*2.* ಎಂ.ಎಲ್.ಸಿ ದಾಖಲೆಯಲ್ಲಿ ಆಗಿನ ಕಾಲದ ಸಿ.ಎಂ.ಒ ಬರವಣಿಗೆ ಮಾಡಿದ್ದಾರೆ. ಆ ಕಾಲಕ್ಕೆ ಡಾ.ಸಂದೀಪ್ ಇವರು ಗಾಯದ ಪ್ರಮಾಣಪತ್ರ ಕೊಟ್ಟಿದ್ದರಿಂದ ಅವರೇ ತುರ್ತು ಚಿಕಿತ್ಸಾ ಘಟಕದ ಮುಖ್ಯಸ್ಥರು ಎಂದು ಹೇಳುತ್ತಿದ್ದೇನೆ. ಗಾಯದ ಇತಿಹಾಸವನ್ನು ವೈದ್ಯರೇ ಬರೆದಿರುವುದರಿಂದ ಆ ಬಗ್ಗೆ ಅವರನ್ನೇ ಕೇಳಬೇಕು. ಎಂ.ಎಲ್.ಸಿ ದಾಖಲೆಯಲ್ಲಿ ಸಾಗರ್ ಬಿನ್ ನಾಗರಾಜ್ ಎಂದು ನಂತರ ಸೇರಿಸಲಾಗಿದೆ ಎಂದರೆ ಆ ಬಗ್ಗೆ ವೈದ್ಯರನ್ನೇ ಕೇಳಬೇಕು. ಗಾಯಾಳುವನ್ನು ಆಸ್ಪತ್ರೆಗೆ ಯಾರು ಕರೆದುಕೊಂಡು ಬಂದಿದ್ದರು ಎಂದು ಸಹ ವೈದರನ್ನೇ ಕೇಳಬೇಕು.

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*